# ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/21/ದಿನಗೂಲಿ.ನೌ.ವೇ/ಆಯವ್ಯಯ/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು ದಿನಾಂಕ:10-08-2017

## ಸುತ್ತೋಲೆ

**ವಿಷಯ:** ಕಾಲೇಜು ಶಿಕ್ಷಣ ಇಲಾಖೆ ದಿನಗೂಲಿ ನೌಕರರ ವೇತನ ಇನ್ನಿತರೆ ಸೌಲಭ್ಯಕ್ಕಾಗಿ ಅನುದಾನ ಬಿಡುಗಡೆ ಕುರಿತು.

**ಉಲ್ಲೇಖ:**1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ/77/ಶಾಸನ/2012 ದಿ:15-02-2012
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ:33:ಯುಇಸಿ:2014 ದಿ:14-11-2014

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ಮತ್ತು (2)ರ ಸರ್ಕಾರದ ಅಧಿಸೂಚನೆಯಲ್ಲಿ ಈ ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ ನೌಕರರುಗಳಿಗೆ ವೇತನ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲು ಆದೇಶವಾಗಿರುತ್ತದೆ. ಆದರೆ ತಮ್ಮ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರುಗಳಿಗೆ 2017-18ನೇ ಸಾಲಿಗೆ ವೇತನ ಬಿಡುಗಡೆ ಮಾಡುವ ಸಂಬಂಧ ಯಾವುದೇ ಕೋರಿಕೆ ಪ್ರಸ್ತಾವನೆಯು ಸ್ವೀಕೃತಗೊಂಡಿರುವುದಿಲ್ಲ. ದಿನಗೂಲಿ ನೌಕರರುಗಳಿಗೆ ವೇತನ ಪಾವತಿಗಾಗಿ ಕೋರಿಕೆ ಸಲ್ಲಿಸುವುದು ಪ್ರಾಂಶುಪಾಲರ ಆದ್ಯ ಕರ್ತವ್ಯವಾಗಿರುತ್ತದೆ. ಇದರಿಂದಾಗಿ ವೇತನ ಪಾವತಿಯಲ್ಲಿ ವಿಳಂಬವಾಗಲು ಕಾರಣರಾಗಿರುತ್ತೀರಿ.

ಈ ಸಂಬಂಧವಾಗಿ ತಮ್ಮ ಕಾಲೇಜಿನಲ್ಲಿ ಕರ್ತವ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರುಗಳಿಗೆ 2017-18 ನೇ ಸಾಲಿಗೆ ಮಾಹೆವಾರು ವೇತನದ ವಿವರಗಳನ್ನು, ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳನ್ನು ಪರಿಶೀಲಿಸಿ ನಿಯಮಾನುಸಾರ ಮಾಹಿತಿ ನೀಡುವಂತೆ ಸೂಚಿಸಿದೆ. ತಪ್ಪಿದಲ್ಲಿ ಮುಂದಿನ ಯಾವುದೇ ರೀತಿಯ ಹೊಣೆಗಾರಿಕೆಗೆ ಪ್ರಾಂಶುಪಾಲರೇ ನೇರ ಜವಾಬ್ದರರಾಗಿರುತ್ತಾರೆ. ಹಾಗೂ ಪ್ರತಿ ಮಾಹೆ ಕೋರಿಕೆ ಸಲ್ಲಿಸದೆ ವರ್ಷಾಂತ್ಯದಲ್ಲಿ ಒಟ್ಟಾರೆ ಅನುದಾನ ಬಿಡುಗಡೆ ಮಾಡಲು ಕೋರಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

1. **ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರೇಕೆರೂರು, ಕೂಡ್ಲಗಿ, ಮಾನ್ವಿ, ಹೊಳೆನರಸೀಪುರ, ಪಾವಗಾಡ, ಮಾಗಡಿ, ಸರ್ಕಾರಿ ಮಹಿಳಾ ಕಾಲೇಜು ಮಂಡ್ಯ, ಮತ್ತು ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು-ಅಗತ್ಯ ಕ್ರಮಕ್ಕಾಗಿ**
2. ಮಾಹಿತಿ ಅಧಿಕಾರಿಗಳು ಕೇಂದ್ರ ಕಛೇರಿ ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು –ಮೇಲ್ಕಂಡ ಸುತ್ತೋಲೆಯನ್ನು ಇಲಾಖೆ ಅಂತರ್ಜಾಲದಲ್ಲಿ ಅಳವಡಿಸಲು
3. ಕಛೇರಿ ಪ್ರತಿ